# ಪ್ರೊ. ಪಿ.ಎಲ್. ಧರ್ಮ

## ಕುಲಪತಿಗಳು, ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ರಾಜ್ಯಶಾಸ್ತ್ರದ ಪ್ರಾಧ್ಯಾಪಕರಾಗಿದ್ದು, ಶ್ರೇಷ್ಠ ಶಿಕ್ಷಕರು, ಸಂಶೋಧನಾಕಾರರು ಎಂದು ಗುರುತಿಸಿಕೊಂಡಿರುವ ಪ್ರೊ. ಪಿ.ಎಲ್. ಧರ್ಮ ಉತ್ತಮ ವಾಗ್ಮಿಗಳು ಹಾಗೂ ಬಹುಭಾಷಾ ಪಾಂಡಿತ್ಯವನ್ನು ಕರಗತ ಮಾಡಿಕೊಂಡಿರುತ್ತಾರೆ. ಶಿಕ್ಷಣ, ಆಡಳಿತ, ಸಮಾಜ ಸುಧಾರಣೆ, ಮಹಿಳಾ ಕಲ್ಯಾಣ ಹಾಗೂ ಅಭಿವೃದ್ಧಿ ಹಲವು ಕ್ಷೇತ್ರಗಳಲ್ಲಿ ಪರಿಣಿತಿಯನ್ನು ಹೊಂದಿರುವ ಇವರು ಸದಾ ಹಸನ್ಮುಖಿಯಾಗಿ ಪಾದರಸದಂತೆ ಚಟುವಟಿಕೆಯಿಂದ ಎಲ್ಲರನ್ನು ತಮ್ಮ ಜೊತೆ ಜೊತೆಯಲ್ಲೇ ಸೇರಿಸಿಕೊಂಡು ಕೆಲಸ ಮಾಡುವುದು ಇವರ ಕಾರ್ಯವೈಖರಿ. ಮಂಗಳೂರು ವಿಶ್ವವಿದ್ಯಾನಿಲಯದ ಹಳೆ ವಿದ್ಯಾರ್ಥಿಯಾಗಿದ್ದು, 1988ರಲ್ಲಿ ಪ್ರಥಮ ರ್‍ಯಾಂಕ್‌ನೊಂದಿಗೆ ಸ್ನಾತಕೋತ್ತರ ಪದವಿಯನ್ನು ಪಡೆದು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿ 1988 ರಿಂದ 36 ವರ್ಷಗಳ ಕಾಲ ಪ್ರಾಧ್ಯಾಪಕರಾಗಿ ಹಾಗೂ ವಿವಿಧ ಆಡಳಿತ ನೆಲೆಯಲ್ಲಿ ಸೇವೆ ಸಲ್ಲಿಸಿರುತ್ತಾರೆ. ವಿದ್ಯಾಥಿಗಳ ನೆಚ್ಚಿನ ಶಿಕ್ಷಕರಾದ ಇವರು ಸಾಕಷ್ಟು ಸಂಶೋಧನಾ ಕಾರ್ಯಗಳನ್ನು ಕೈಗೊಂಡಿದ್ದು ಇವರ ಮಾರ್ಗದರ್ಶನದಲ್ಲಿ 08 ಜನ ವಿದ್ಯಾರ್ಥಿಗಳು ಯಶಸ್ವಿಯಾಗಿ ತಮ್ಮ ಸಂಶೋಧನೆಯನ್ನು ಪೂರ್ಣಗೊಳಿಸಿರುತ್ತಾರೆ. ಇವರ ಕಾರ್ಯಕ್ಷೇತ್ರವು ಬರೀ ಬೋಧನೆ ಮತ್ತು ಸಂಶೋಧನೆಗೆ ಮಾತ್ರ ಸೀಮಿತವಾಗಿರದೇ, ಮಂಗಳೂರು ವಿಶ್ವವಿದ್ಯಾನಿಲಯದ ಹಲವು ಆಡಳಿತಾತ್ಮಕ ಹುದ್ದೆಗಳನ್ನು ಅಲಂಕರಿಸಿ ವಿಶ್ವವಿದ್ಯಾನಿಲಯದ ಸರ್ವತೋಮುಖ ಬೆಳವಣಿಗೆಗೆ ಕಾರಣರಾಗಿರುತ್ತಾರೆ. ಪ್ರೊ. ಧರ್ಮರವರು ಪ್ರಭಾರ ಕುಲಸಚಿವರಾಗಿ ಹಾಗೂ ಕರ್ನಾಟಕ ಸರ್ಕಾರದ ಆದೇಶದಂತೆ ಪರೀಕ್ಷಾಂಗ ಕುಲಸಚಿವರಾಗಿ ಕಾರ್ಯ ನಿರ್ವಹಿಸಿದ್ದು, ಇದೀಗ ಅತ್ಯಂತ ಉನ್ನತ ಹುದ್ದೆಯಾದ ಕುಲಪತಿ ಹುದ್ದೆಯನ್ನು ಅಲಂಕರಿಸಿರುತ್ತಾರೆ.

ಸದರಿಯವರು ಪರೀಕ್ಷಾಂಗ ಕುಲಸಚಿವರಾಗಿದ್ದ ಸಂದರ್ಭದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ಹಲವು ಹೊಸತನಗಳಿಗೆ ಸಾಕ್ಷಿಯಾಗಿತ್ತು. ಇವುಗಳಲ್ಲಿ ವಿಶ್ವವಿದ್ಯಾನಿಲಯವೇ ಆಂತರಿಕವಾಗಿ ಸಿದ್ಧಪಡಿಸಿದ MULinx Softwareನ್ನು ಬಳಸಿ ಪರೀಕ್ಷೆ ನಡೆಸಿರುವುದು ಒಂದು ಹೆಗ್ಗಳಿಕೆ. Covid -19ರ ಸಂದರ್ಭದಲ್ಲಿ ವಿದ್ಯಾರ್ಥಿಗಳು ಮನೆಯಿಂದ ಹೊರಗೆ ಬರಲು ಸಾಧ್ಯವಾಗದ ಸ್ಥಿತಿಯಲ್ಲಿದ್ದಾಗ ಪರೀಕ್ಷೆ ನಡೆಸಿ ಪರೀಕ್ಷಾ ಫಲಿತಾಂಶ ನೀಡಬೇಕಾದ ಸಂದರ್ಭದಲ್ಲಿ ಪ್ರೊ. ಧರ್ಮರವರು ವಿದ್ಯಾರ್ಥಿಗಳು ಎಲ್ಲಿರುವರೋ ಅಲ್ಲಿಂದಲೇ ಪರೀಕ್ಷೆ ನಡೆಸುವ ವ್ಯವಸ್ಥೆಯನ್ನು ವಿವಿಧ ಕಾಲೇಜು ಹಾಗೂ ವಿಶ್ವವಿದ್ಯಾನಿಲಯದ ಸಹಕಾರದೊಂದಿಗೆ ಅತ್ಯಂತ ಸಮರ್ಪಕವಾಗಿ, ಸಮರ್ಥವಾಗಿ ನಡೆಸಿರುತ್ತಾರೆ. ಇದು ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಬಹಳ ಗೌರವವನ್ನು ತಂದುಕೊಟ್ಟ ವಿಚಾರವಾಗಿರುತ್ತದೆ. ಕ್ರೀಡೆ, ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಮಂಗಳೂರು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿರುವ ವಿದ್ಯಾರ್ಥಿಗಳಿಗೆ ವಿಶೇಷ

ಪರೀಕ್ಷೆಗಳನ್ನು ನಡೆಸುವ ಒಂದು ವ್ಯವಸ್ಥೆಯನ್ನು ಸಹ ಇವರ ಅವಧಿಯಲ್ಲಿ ಪ್ರಾರಂಬಿಸಲಾಯಿತು. ಅಲ್ಲದೆ ಹೊಸ ತಂತ್ರಜ್ಞಾನದ ಬಳಕೆಯಿಂದ 1981 ರಿಂದ 2000 ರವರೆಗಿನ ಪರೀಕ್ಷಾಂಗ ವಿಭಾಗದ ಎಲ್ಲಾ ಲೆಡ್ಜರ್‌ಗಳನ್ನು ಡಿಜಿಟೈಸ್ (Digitize) ಮಾಡುವ ಕಾರ್ಯವು ಇವರ ಅವಧಿಯಲ್ಲಿ ನಡೆಯಿತು. ಮಹಿಳೆಯರ ಸಾಮಾಜಿಕ ಸ್ಥಿತಿಗತಿ, ಆರ್ಥಿಕ ಅಭಿವೃದ್ಧಿ, ಮಹಿಳಾ ಸಬಲೀಕರಣದ ಬಗ್ಗೆ ಸಾಕಷ್ಟು ಆಸಕ್ತಿಯನ್ನು ಹೊಂದಿರುವ ಇವರು ಈ ಕ್ಷೇತ್ರದಲ್ಲಿ ಸಾಕಷ್ಟು ಕೊಡುಗೆಗಳನ್ನು ನೀಡಿರುವುದಲ್ಲದೆ ಇವರು ಮಾರ್ಗದರ್ಶನ ಮಾಡಿರುವ ಹಲವಾರು ಸಂಶೋಧನಾ ಪ್ರಬಂಧಗಳಲ್ಲಿ ಮಹಿಳಾ ಅಭಿವೃದ್ಧಿಯ ಬಗ್ಗೆ ಬೆಳಕು ಚೆಲ್ಲಲಾಗಿದೆ.

ಶೈಕ್ಷಣಿಕ ಕ್ಷೇತ್ರದಲ್ಲಿನ ಶ್ರೇಷ್ಠ ಸಾಧನೆಗಾಗಿ 2020ನೇ ಸಾಲಿನ Excellence and Leadership in education ಎಂಬ ಪ್ರಶಸ್ತಿಗೆ, ಪ್ರತಿಷ್ಠಿತ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ರಾಷ್ಟ್ರೀಯ ಪುರಸ್ಕಾರಕ್ಕೆ ಪ್ರೊ. ಧರ್ಮ ಇವರು ಭಾಜನರಾಗಿದ್ದು, 2023ರಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಶಿಕ್ಷಣ ಕ್ಷೇತ್ರಕ್ಕೆ ನೀಡಿರುವ ಕೊಡುಗೆಗಳಿಗಾಗಿ ಸದರಿಯವರನ್ನು ಅತ್ಯುತ್ತಮ ಶಿಕ್ಷಕರಲ್ಲಿ ಒಬ್ಬರೆಂದು ಗುರುತಿಸಲಾಗಿರುತ್ತದೆ.

ಇತ್ತೀಚೆಗೆ, ಮಾರ್ಚ್ 2024ರಲ್ಲಿ ಪ್ರೊ. ಧರ್ಮ ಇವರು ಶಿಕ್ಷಣದಲ್ಲಿನ ಶ್ರೇಷ್ಠತೆ ಮತ್ತು ನಾಯಕತ್ವಕ್ಕಾಗಿ ರಾಜ್ಯಶಾಸ್ತ್ರದ ಅತ್ಯುತ್ತಮ ಪ್ರಾಧ್ಯಾಪಕರೆಂಬ ಹೆಗ್ಗಳಿಕೆಗೆ ಪಾತ್ರರಾಗಿರುತ್ತಾರೆ.

*****